

### ಪತಿ–ಪತ್ನಿ!

ಸೆಕ್ರೆಟರಿ ಗೀತಾ ತನ್ನ ಬಾಸ್ ಜೊತೆ ಟ್ರೈನ್‌ನಲ್ಲಿ ಕಾರ್ಯನಿಮಿತ್ತ ಪಯಣಿಸುತ್ತಿದ್ದಳು. ನಡು ರಾತ್ರಿಯವರೆಗೂ ಆಕೆ ತನ್ನ ಖಾಸಗಿ ಜೀವನದ ಬಗ್ಗೆ ಬಾಸ್‌ಗೆ ವಿವರಿಸುತ್ತಿದ್ದಳು.

ಮಾತಿನ ಮಧ್ಯೆ ಅಚಾನಕ್ಕಾಗಿ ಬಾಸ್ ಕೇಳಿದರು, 'ಹಾಗಿದ್ದರೆ... ಇಂದಿನ ರಾತ್ರಿಯನ್ನು ನಾವಿಬ್ಬರೂ ಪತಿ– ಪತ್ನಿಯರಂತೆ ಕಳೆಯೋಣವೆ?'

ಗೀತಾ ನಾಚುತ್ತಾ ನುಡಿದಳು, 'ನಿಮ್ಮಿಷ್ಟ ಸರ್...'

ಬಾಸ್: 'ಸರಿ ಹಾಗಾದರೆ, ನಿನ್ನ ಪುರಾಣವನ್ನು ಸಾಕುಮಾಡು. ನನಗೆ ನಿದ್ದೆ ಮಾಡಲು ಬಿಡು!'



### ಮದುವೆ X ಸುಖ

ಗೋಪಿ: ನನ್ನ ವಿವಾಹವೇಕೆ ಆಗುತ್ತಿಲ್ಲ?

ಜೋತಿಷಿ: ಹೇಗೆ ಆಗಲು ಸಾಧ್ಯ ಮಗೂ... ನಿನ್ನ ಜಾತಕದಲ್ಲಿ ಜೀವನ ಪೂರ್ತಿ ಸುಖಪಡುವ ಯೋಗವಿರುವಾಗ...!

### ವರ ಪ್ರಸಾದ?

ಪತ್ನಿ: ಸ್ವಾಮೀಜಿ, ನನ್ನ ಮದುವೆಯಾಗಿ 5 ವರ್ಷಗಳಾದರೂ ಇನ್ನೂ ಸಂತಾನ ಭಾಗ್ಯ ಒದಗಿ ಬಂದಿಲ್ಲ...

ಸ್ವಾಮೀಜಿ: ನಾನು ಹಿಮಾಲಯದ ತಪ್ಪಲಿನ ದೇವಾಲಯದಲ್ಲಿ ನಿನ್ನ ಹೆಸರಿನಲ್ಲೊಂದು ದೀಪ ಬೆಳಗಿಸುವೆ. ಅದರಿಂದಾಗಿ ನಿನ್ನ ಇಷ್ಟಾರ್ಥ ಸಿದ್ಧಿಸುವುದು.

10 ವರ್ಷಗಳ ಬಳಿಕ ಮರಳಿ ಆಕೆಯ ಮನೆಗೆ ಬಂದಾಗ ಅಲ್ಲಿ 10 ಮಕ್ಕಳು ಆಟವಾಡುತ್ತಿರುವುದನ್ನು ಕಂಡು ಸ್ವಾಮೀಜಿ ಹರಸುತ್ತಾ ನುಡಿದರು, 'ಶುಭವಾಗಲಿ ಪುತ್ರಿ; ನಿನ್ನ ಮಕ್ಕಳ ಅಪ್ಪ ಎಲ್ಲಿ, ಕಾಣಿಸುತ್ತಿಲ್ಲವಲ್ಲ?'

ಪತ್ನಿ: ಅವರು ಹಿಮಾಲಯಕ್ಕೆ ಹೋಗಿದ್ದಾರೆ ಸ್ವಾಮೀಜಿ, ನೀವು ಹಚ್ಚಿಟ್ಟ ದೀಪವನ್ನು ನಂದಿಸಿ ಬರಲು...!

### ಬುದ್ಧಿವಂತಿಕೆ!

10 ಮಂದಿ ವಿದೇಶೀಯರು, ಮತ್ತೊರ್ವ ಭಾರತೀಯ ಹೆಲಿಕಾಪ್ಟರಿನ ಹಗ್ಗ ಹಿಡಿದು ನೇತಾಡುತ್ತಿದ್ದರು.

ಪೈಲಟ್: ಭಾರ ಜಾಸ್ತಿಯಾಗುತ್ತಿದೆ, ನಿಮ್ಮಲ್ಲಿ ಒಬ್ಬ ಹಗ್ಗ ಬಿಡಬೇಕಾಗುವುದು.

ಭಾರತೀಯ: ಈ ಬಲಿದಾನ ನಾನು ನೀಡುತ್ತೇನೆ. ಏಕೆಂದರೆ ನಾನೊಬ್ಬ ಅಪ್ಪಟ ಭಾರತೀಯ... ಅದಕ್ಕಾಗಿ ಚಪ್ಪಾಳೆ ತಟ್ಟಿದರೆ, ಮಾತ್ರ...!

ಎಲ್ಲಾ ವಿದೇಶೀಯರು ಹರ್ಷಗೊಂಡು ಚಪ್ಪಾಳೆ ತಟ್ಟಿದರು...!

### ಪ್ರಾಮುಖ್ಯತೆ!

ಗೋಪಿ ತನ್ನ ಗರ್ಲ್ ಫ್ರೆಂಡನ್ನು ಮರ್ಸಿಡಿಸ್‌ನಲ್ಲಿ ಸುತ್ತಾಡಿಸುತ್ತಿರುವಾಗ ನಿವೇದಿಸುತ್ತಾನೆ; 'ನಾನು ನಿನ್ನಿಂದ ಒಂದು ವಿಷಯವನ್ನು ಮುಚ್ಚಿಟ್ಟಿದ್ದೇನೆ... ಅದೇನೆಂದರೆ... ನನಗೀಗಾಗಲೇ ಮದುವೆಯಾಗಿದೆ...'

ಗರ್ಲ್ ಫ್ರೆಂಡ್: (ಗೋಪಿಯನ್ನು ಬರಸೆಳೆದು ಆಲಂಗಿಸುತ್ತಾ) ಅಬ್ಬಾ, ನನಗಂತೂ ತುಂಬಾ ಭಯವಾಗಿತ್ತು. ಈ ಮರ್ಸಿಡಿಸ್ ಕಾರು ನಿನ್ನದಲ್ಲ ಅಂತ ಹೇಳ್ತೀಯ ಅಂದ್ಕೊಂಡಿದ್ದೆ ನಾನು...!

**(ಸಂ): ರಮಣ್ ಶೆಟ್ಟಿ ರೆಂಜಾಳ್, ಮುಂಬೈ**

